

# ಯಾರು ದೊಡ್ಡವರು

ಚಿತ್ರ: ಶಶಿಧರ್ ಹಳೇಮನಿ

ಒಮ್ಮೆ ಬೀರಬಲ್ಲ ಯಾವುದೋ ಕಾರ್ಯನಿಮಿತ್ತ ಕಾಬೂಲಿಗೆ ಹೋದನು. ಅಲ್ಲಿನ ಸ್ಥಳೀಯ ಜನರಂತೆ ಈತ ವೇಷಭೂಷಣ ಹೊಂದಿಲ್ಲದಿದ್ದರಿಂದ ಅಲ್ಲಿಯವರು ಈತನನ್ನು ವಿದೇಶೀಯನೆಂದು ತಿಳಿದರು. ಆತ ದೆಹಲಿಯಿಂದ ಬಂದಿರುವನೆಂದು ತಿಳಿದ ಮೇಲೆ ಆತ ಅಕ್ಬರನ ಬೇಹುಗಾರನೆಂದು ಭಾವಿಸಿದರು. ರಾಜಭಟರು ಕೂಡಲೇ ಅವನನ್ನು ಹಿಡಿದು ಅಲ್ಲಿನ ರಾಜನ ಮುಂದೆ ತಂದು ನಿಲ್ಲಿಸಿದರು. ರಾಜ ಪ್ರಶ್ನಿಸಿದ.

'ಯಾರು ನೀನು? ಕಾಬೂಲಿಗೆ ಬಂದ ಕಾರಣವೇನು?'

ಅದಕ್ಕೆ ಬೀರಬಲ್ಲ, 'ನಾನೊಬ್ಬ ಪ್ರವಾಸಿ, ಬೇರೆ ಬೇರೆ ದೇಶಗಳಿಗೆ ಭೇಟಿ ನೀಡುವುದು ನನ್ನ ಹವ್ಯಾಸ ಮತ್ತು ಅಲ್ಲಿನ ಜನರ ಬಗೆಗೆ ತಿಳಿದುಕೊಳ್ಳುವುದು ನನ್ನ ಉದ್ದೇಶ.

'ನೀನು ಹೆಚ್ಚು ದೇಶಗಳಿಗೆ ಭೇಟಿ ಕೊಟ್ಟಿದ್ದರೆ ಹೇಳು, ಎಲ್ಲಿಯಾದರೂ ನನ್ನಂತಹ ದೊರೆಯನ್ನು ಕಂಡಿರುವೆಯಾ?'

ಬೀರಬಲ್ಲ ಕೈಮುಗಿದು ಉತ್ತರಿಸಿದ, 'ಮಹಾಪ್ರಭು, ತಾವು ಹುಣ್ಣಿಮೆ ರಾತ್ರಿಯ ಚಂದ್ರನಂತಿದ್ದೀರಿ. ನಿಮ್ಮೊಡನೆ ಯಾರನ್ನೂ ಹೋಲಿಸಲಾಗುವುದಿಲ್ಲ.'

'ನಾನು ಹುಣ್ಣಿಮೆ ರಾತ್ರಿಯ ಚಂದ್ರನಾದರೆ ನಿಮ್ಮ ದೊರೆ ಏನು?'

'ಅವರು ಅಮಾವಾಸ್ಯೆಯ ನಂತರ ಬರುವ ಬಿದಿಗೆ ಚಂದ್ರ'

ಬೀರಬಲ್ಲನ ಉತ್ತರವನ್ನು ಆಲಿಸಿದ ಕಾಬೂಲಿನ ರಾಜನಿಗೆ ತುಂಬಾ ಸಂತೋಷವಾಯಿತು. ಕೂಡಲೆ ಆತ ಬೀರಬಲ್ಲನನ್ನು ಬಂಧನದಿಂದ ವಿಮುಕ್ತಿಗೊಳಿಸಿ, ಅಮೂಲ್ಯ ಕಾಣಿಕೆಗಳನ್ನು ನೀಡಿ ಸತ್ಕರಿಸಿ ಕಳಿಸಿಕೊಟ್ಟನು.

ನಂತರದಲ್ಲಿ ಬೀರಬಲ್ಲನು ದೆಹಲಿಗೆ ಹಿಂದಿರುಗಿದ ಮೇಲೆ ಈ ಕಥೆಯನ್ನು ತನ್ನ ಸ್ನೇಹಿತರಿಗೆ ಹೇಳಿದನು. ಕೂಡಲೇ ಈ ಸುದ್ದಿ ಎಲ್ಲ ಕಡೆ ಹಬ್ಬಿತು. ಬೀರಬಲ್ಲನ ಬಗೆಗೆ ಅಸಮಾಧಾನ ಹೊಂದಿದ್ದ ಆ ಸ್ಥಾನಿಕರಿಗೆ ಅವನನ್ನು ಕೆಡವಲು ಅವಕಾಶ ದೊರಕಿತು. ಅವರು ಈ ಕಥೆಯನ್ನು ಸ್ವಲ್ಪ ಉಪ್ಪುಕಾರ ಸೇರಿಸಿ ಅಕ್ಬರ್ ಚಕ್ರವರ್ತಿಗೆ ಅರುಹಿದರು.

ಮಾರನೆಯ ದಿನ ಅಕ್ಬರ್ ದೊರೆ ಬೀರ್ಬಲ್ಲನಿಗೆ ಕೂಡಲೆ ಆಸ್ಥಾನಕ್ಕೆ ಬರುವಂತೆ ಆಜ್ಞೆ ಮಾಡಿದನು. ಆತ ಬಂದ ಕೂಡಲೆ 'ಬೀರ್ಬಲ್ ನೀನು ಕಾಬೂಲಿನ ದೊರೆಯನ್ನು ಹುಣ್ಣಿಮೆಯ ಚಂದ್ರ ಎಂದೂ ನನ್ನನ್ನು ಮಾತ್ರ ಬಿದಿಗೆ ಚಂದ್ರ ಎಂದು ಕರೆಯಲು ನಿನಗೆಷ್ಟು ಧೈರ್ಯ?' ಎಂದು ಗುಡುಗಿದನು.

'ಮಹಾ ಪ್ರಭೂ' ಎನ್ನುತ್ತಾ ಬೀರಬಲ್ಲ, 'ಇಸ್ಲಾಮಿಕ್ ಕ್ಯಾಲೆಂಡರ್‌ನಂತೆ ಹುಣ್ಣಿಮೆಯು ಮಾಸದ ಅಂತ್ಯದಲ್ಲಿ ಬರುತ್ತದೆ. ಅದಕ್ಕೆ ಯಾರೂ ಮಹತ್ವ ನೀಡುವುದಿಲ್ಲ. ಅದು ತನ್ನ ಪೂರ್ಣ ಗಾತ್ರ ಹೊಂದಿದ ಮೇಲೆ ಕ್ಷೀಣಿಸುತ್ತಾ ಹೋಗುತ್ತದೆ. ಆದರೆ ಬಿದಿಗೆಯ ಚಂದ್ರನನ್ನು ಅತ್ಯಂತ ಪವಿತ್ರವೆಂದು ಹಿಂದೂ ಹಾಗೂ ಮುಸ್ಲಿಮರು ನಂಬುತ್ತಾರೆ. ಈದ್ ಹಬ್ಬವನ್ನು ಬಿದಿಗೆ ಚಂದ್ರನನ್ನು ಕಂಡ ನಂತರವೆ ಆಚರಿಸುತ್ತಾರೆ. ಮೇಲಾಗಿ ಬಿದಿಗೆ ಚಂದ್ರನು ತನ್ನ ಗಾತ್ರವನ್ನು ದಿನೇ ದಿನೇ ಹೆಚ್ಚಿಸಿಕೊಳ್ಳುತ್ತಾ ಹೋಗುತ್ತಾನೆ, ನೀವು ಸದಾ ಕಾಲವೂ ನಿಮ್ಮ ಖ್ಯಾತಿಯನ್ನು ಹೆಚ್ಚಿಸಿಕೊಂಡಂತೆ'

ಬೀರಬಲ್ಲನ ಸಮಜಾಷಿಯಿಯನ್ನು ಕೇಳಿದ ಅಕ್ಬರನಿಗೆ ಅತ್ಯಂತ ಖುಷಿಯಾಯಿತು. ಅವನು ಬೀರಬಲ್ಲನಿಗೆ ಅನೇಕ ಉಡುಗೊರೆ ನೀಡಿದಾಗ ಆಸ್ಥಾನಿಕರು ತಮ್ಮ ಪ್ರಯತ್ನ ವಿಫಲವಾಯಿತಲ್ಲ ಎಂದು ಕೈಕೈ ಹಿಸುಕಿಕೊಂಡರು.

■ ಜಿ. ಬಸವರಾಜಪ್ಪ, ಮೈಸೂರು

---

# ಹಸಿರು ಮಿತ್ರ



ಜನುಮ ದಿನಕ್ಕೆ
ಸಸಿಯ ಕಾಣಿಕೆ
ಪುಟ್ಟು ಗೆಳೆಯನಿಗೆ ಕೊಟ್ಟನು
ನೀರು ಹಾಕಿ ಬೆಳೆಸುವಂತೆ
ಕಿವಿ ಮಾತನು ನುಡಿದನು!

ಮತ್ತೆ ಮತ್ತೆ
ಸಸಿಯ ನೆನಪು
ಮಾಡಿ ಮಾಡಿ ಬಿಟ್ಟನು
ಗೆಳೆಯನಲ್ಲಿ
ಸಸಿಯ ಪ್ರೀತಿ
ನೆಲೆಯೂರಿಸಿ ಇಟ್ಟನು!

ಪುಟ್ಟನವಗೆ
ಬೆಳೆದ ಸಸಿಯ
ಗೆಳೆಯ ತೋರಿ ನಲಿದನು
ಮಮತೆಯಿಂದ
ಮರವಾಗಿಸಿ
ಮನೆಗೆ ಶೋಭೆ ತಂದನು!

ಹಕ್ಕಿ ಬಂದು
ಉಲಿದು ಬಿಡಲು
ಹಿಗ್ಗಿ ಹಿಗ್ಗಿ ಕುಣಿದನು
ಹಕ್ಕಿ ಮರದ
ಚೆಲುವು ಕಂಡು
ನಿತ್ಯ ಮುದವ ಪಡೆದನು!

ತಂಪು ನೆರಳು
ಸಿಹಿಯ ಹಣ್ಣು
ಮರವು ವರವು ಅರಿತನು
ಪುಟ್ಟನನ್ನು
ಹಾಡಿ ಹೊಗಳಿ
ಹಸಿರು ಮಿತ್ರ ಅಂದನು!

■ ಸಂಗಮೇಶ ಗುಜಗೊಂಡ, ಮೂಡಲಗಿ